




## ಎವ್ವರ್‌ನೋಟ್

ನೋಟ್ಸ್ ತೆಗೆದುಕೊಳ್ಳಲು ಅತ್ಯುತ್ತಮ ಆ್ಯಪ್. ಚಿತ್ರಗಳನ್ನು, ಆಡಿಯೋ, ಟೈಪ್ ಆದ ನೋಟ್ಸ್, ಡಿಕ್ಟೇಟ್ ಮಾಡಲಾದ ನೋಟ್ಸ್‌ಗಳನ್ನು ಸಪೋರ್ಟ್ ಮಾಡುತ್ತದೆ. ಇದರಲ್ಲಿ ಸರ್ಚ್ ಮಾಡುವ ಟೂಲ್ ಕೂಡಾ ಉತ್ತಮವಾಗಿ ಕೆಲಸ ಮಾಡುತ್ತದೆ. ನಿಮ್ಮ ನೋಟ್ಸ್‌ನಲ್ಲಿರುವ ಶಬ್ದಗಳನ್ನು ಮಾತ್ರವಲ್ಲದೇ ಅಟ್ಯಾಚ್ ಮಾಡಿದ ಹಾಗೂ ನಿಮ್ಮ ಫೋನ್‌ನ ಇತರ ಡಾಕ್ಯುಮೆಂಟ್‌ನಲ್ಲಿರುವ ಶಬ್ದಗಳನ್ನು ಕೂಡಾ ಸರ್ಚ್ ಮಾಡುತ್ತದೆ. ಜೊತೆಗೆ ಕೈಬರಹದ ಇಮೇಜ್‌ನಲ್ಲೂ ಸರ್ಚ್ ಮಾಡುತ್ತದೆ. ಇದು ವಿಂಡೋಸ್ ಫೋನ್ ಆ್ಯಪ್. ಆಫ್‌ಲೈನ್‌ನಲ್ಲೂ ಕೆಲಸ ಮಾಡುತ್ತದೆ.

## ಕ್ಯಾಲ್

ಎನಿ.ಡು ಐಓಎಸ್ ಮತ್ತು ಆ್ಯಂಡ್ರಾಯ್ಡ್‌ಗಾಗಿ ಕ್ಯಾಲ್ ಆ್ಯಪ್ ತಂದಿದ್ದು, ನಿತ್ಯದ ಕಾರ್ಯಕ್ರಮದ ವಿವರಗಳನ್ನು ನೀಡುತ್ತದೆ. ನೀವು ಮಾಡಬೇಕಾದ ಕೆಲಸ, ಮೀಟಿಂಗ್, ಅಪಾಯಿಂಟ್‌ಮೆಂಟ್ ಇದರಲ್ಲಿ ಸೇರಿಸಬಹುದು. ಜೊತೆಗೆ ಕ್ಯಾಲ್ ಆ ದಿನದ ವಿಶೇಷತೆಗಳನ್ನು ನೀಡುತ್ತದೆ. ಇದನ್ನು ಬಳಸಲು ಎನಿ.ಡು. ಅಕೌಂಟ್ ಇರಬೇಕು.




## ಸೆಂಟಿನಲ್

ಮಹಿಳೆಯರ ಸುರಕ್ಷತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಿರುವ ಆ್ಯಪ್. ಅಪಾಯಕಾರ ಪರಿಸ್ಥಿತಿ ಎದುರಾದಾಗ ಬಳಸಬಹುದು. ನಿಮ್ಮ ಕುಟುಂಬದ ಸದಸ್ಯರ ಅಥವಾ ಸ್ನೇಹಿತರ ಅಥವಾ ಪೊಲೀಸರ ನಂಬರ್ ಅನ್ನು ಇದರಲ್ಲಿ ಇಟ್ಟುಕೊಳ್ಳಿ. ಅಪಾಯಕ್ಕೆ ಸಿಲುಕಿದಾಗ ಅಲ್ಲಿಗೆ ಕರೆ ಹೋಗುತ್ತದೆ. ಅಂದರೆ ಆ್ಯಪ್ ಮೇಲೆ ಕುಟ್ಟಿದರೆ ಸಾಕು. ಇದಕ್ಕೆ ಆನ್‌ಲೈನ್ ಅಗತ್ಯ.

## ವೇಯ್ಟ್ ಲಾಸ್ ಆ್ಯಪ್

ಇದು ಬಿಎಂಐ ಚಾರ್ಟ್, ವ್ಯಾಯಾಮದ ವಿವರ, ಆಹಾರದ ಶಿಫಾರಸ್ಸುಗಳನ್ನು ಒಳಗೊಂಡಿದೆ. ಜೊತೆಗೆ ನಿಮ್ಮ ಭಾವಚಿತ್ರದ ಮೇಲೆ ತೂಕ ಇಳಿಸುವ ಪ್ರಾತ್ಯಕ್ಷಿಕೆ ತೋರಿಸುತ್ತದೆ. ಇದು ಐಫೋನ್ ಆ್ಯಪ್.








## ಕೊಲೆಸ್ಟ್ರಾಲ್ ತಪಾಸಣೆಗೆ ಆ್ಯಪ್

ಹೋಂ ಕೊಲೆಸ್ಟ್ರಾಲ್ ತಪಾಸಣೆ ಉಪಕರಣದಿಂದ ಟೋಟಲ್ ಕೊಲೆಸ್ಟ್ರಾಲ್ ಮಾತ್ರ ನೋಡಿಕೊಳ್ಳಬಹುದು. ಆದರೆ ಈಗ ಕಂಡು ಹಿಡಿದಿರುವ ಸ್ಮಾರ್ಟ್‌ಫೋನ್ ಕೊಲೆಸ್ಟ್ರಾಲ್ ಆ್ಯಪ್ – ರ್‍ಯಾಪಿಡ್ ಡಯಾಗ್ನಾಸ್ಟಿಕ್‌ನಿಂದ ಕೆಟ್ಟ ಕೊಲೆಸ್ಟ್ರಾಲ್ ಎಲ್‌ಡಿಎಲ್ ಹಾಗೂ ಒಳ್ಳೆಯ ಕೊಲೆಸ್ಟ್ರಾಲ್ ಎಚ್‌ಡಿಎಲ್ ಅನ್ನು ಪರೀಕ್ಷೆ ಮಾಡಿಕೊಳ್ಳಬಹುದು. ಇದಕ್ಕೆ ಉಪಕರಣ ಬಂದಿದೆ. ಇದನ್ನು ಸ್ಮಾರ್ಟ್‌ಫೋನ್‌ಗೆ ಅಂಟಿಸಬಹುದು. ಟೆಸ್ಟ್ ಪಟ್ಟಿಯಲ್ಲಿ ರಕ್ತ, ಬೆವರು ಅಥವಾ ಎಂಜಲನ್ನು ಅಂಟಿಸಿ. ಉಪಕರಣದಲ್ಲಿರುವ ಕ್ಯಾಮೆರಾ ಇದನ್ನು ಸೆರೆ ಹಿಡಿದು ಆ್ಯಪ್‌ಗೆ ಕಳಿಸುತ್ತದೆ. ಅದು ಕಲರಿಮೆಟ್ರಿಕ್ ವಿಶ್ಲೇಷಣೆಯಿಂದ ಕೊಲೆಸ್ಟ್ರಾಲ್ ಮಟ್ಟವನ್ನು ಹೇಳುತ್ತದೆ. ಜೊತೆಗೆ ಟ್ರೈಗ್ಲಿಸರೈಡ್ ಹಾಗೂ ವಿಟಮಿನ್ ಡಿ ಮಟ್ಟವನ್ನೂ ತಿಳಿಸುತ್ತದೆ. ವಿಟಾಮಿ ಟೆಕ್ನಾಲಜೀಸ್ ಒಂದು ವರ್ಷದಲ್ಲೇ ಈ ಉಪಕರಣವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ.

■ ಎಸ್. ತುಂಬೆ